ಗ್ರಾಮ ಪಂಚಾಯತ್‌ಗಳಲ್ಲಿ ಜೋಡಿ ಲೆಕ್ಕ ಪದ್ಧತಿಯ ಮಾಹಿತಿ

145 (08) ಶ್ರೀ ವಸಂತಬಂಗೇರ ಕೆ. (ಬೆಳ್ತಿಂಗಡಿ):– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಗ್ರಾಮ ಪಂಚಾಯತ್‌ಗಳಲ್ಲಿ ಜೋಡಿ ಲೆಕ್ಕ ಪದ್ಧತಿಯಲ್ಲಿ ಲೆಕ್ಕಪತ್ರಗಳನ್ನು ನಮೂದಿಸುವ ಕಾರ್ಯನಿರ್ವಹಣೆಯನ್ನು ಯಾವ ವರ್ಷದಿಂದ ಖಾಸಗಿಯವರಿಗೆ ವಹಿಸಲಾಗಿದೆ ;

ಆ) ಗ್ರಾಮ ಪಂಚಾಯತ್‌ಗಳಲ್ಲಿ ಈಗಲೂ ಖಾಸಗಿಯವರೇ ಜೋಡಿ ಲೆಕ್ಕ ಪದ್ಧತಿಯಲ್ಲಿ ಲೆಕ್ಕ ಪತ್ರಗಳನ್ನು ನಿರ್ವಹಣೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಕಳೆದ 3 ವರ್ಷಗಳಲ್ಲಿ ಜೋಡಿ ಲೆಕ್ಕ ಪದ್ಧತಿಯಲ್ಲಿ ಲೆಕ್ಕ ಪತ್ರ ನಿರ್ವಹಣೆಗಾಗಿ ಖಾಸಗಿಯವರಿಗೆ ಗ್ರಾಮ ಪಂಚಾಯತ್‌ಗಳಿಂದ ಎಷ್ಟು ಮೊತ್ತವನ್ನು ಪಾವತಿಸಲಾಗಿದೆ (ತಾಲ್ಲೂಕುವಾರು ವಿವರ ನೀಡುವುದು)

ಈ) ಗ್ರಾಮ ಪಂಚಾಯತ್‌ಗಳಲ್ಲಿ ಅಭಿವೃದ್ಧಿ ಅಧಿಕಾರಿ, ಗುಮಾಸ್ತ, ಬಿಲ್ ಕಲೆಕ್ಟರ್ ಇತ್ಯಾದಿ ಸಿಬ್ಬಂದಿಗಳಿದ್ದರು ಅತ್ಯಂತ ಸುಲಭವಾದ ಜೋಡಿ ಲೆಕ್ಕ ಪದ್ಧತಿಯಲ್ಲಿ ಲೆಕ್ಕಪತ್ರಗಳನ್ನು ನಿರ್ವಹಿಸಲು ಖಾಸಗಿಯವರಿಗೆ ವಹಿಸಿಕೊಟ್ಟಿರುವ ಉದ್ದೇಶವೇನು;

ಉ) ಸದರಿ ಗುತ್ತಿಗೆಯನ್ನು ಎಷ್ಟು ವರ್ಷದವರೆಗೆ ಮುಂದುವರಿಸುವ ಉದ್ದೇಶ ಸರ್ಕಾರಕ್ಕಿದೆ ?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು):–

ಅ) ಕರ್ನಾಟಕ ಪಂಚಾಯತ್‌ರಾಜ್ (ಗ್ರಾಮ ಪಂಚಾಯಿತಿಯ ಲೆಕ್ಕ ಪತ್ರ ಮತ್ತು ಆಯವ್ಯಯ) ನಿಯಮಗಳು 2006ರ ಪ್ರಕಾರ ದೇಶದಲ್ಲಿ ಮೊಟ್ಟ ಮೊದಲ

ಬಾರಿಗೆ ಕರ್ನಾಟಕದ ಗ್ರಾಮ ಪಂಚಾಯತ್‌ಗಳಲ್ಲಿ ಜೋಡಿ ಲೆಕ್ಕ ಪದ್ಧತಿಯಲ್ಲಿ ಲೆಕ್ಕಪತ್ರಗಳನ್ನು ಅಳವಡಿಸಲಾಗಿದೆ.

ಈ ಕುರಿತು ಚಾಟರ್ಡ್ ಅಕೌಂಟೆಂಟ್ ಫರ್ಮಗಳಿಗೆ ಗ್ರಾಮ ಪಂಚಾಯತ್‌ಗಳಲ್ಲಿ ಜೋಡಿ ಲೆಕ್ಕ ಪದ್ಧತಿಯಲ್ಲಿ ಲೆಕ್ಕಪತ್ರಗಳನ್ನು ನಮೂದಿಸುವ ಕಾರ್ಯನಿರ್ವಹಣೆಗೆ ಸಹಾಯವಾಗಲು ಹಾಗೂ ಕಲಿಕೆ ಸಲುವಾಗಿ 2007ನೇ ಇಸವಿ ಅಕ್ಟೋಬರ್‌ನಿಂದ ವಹಿಸಿಕೊಡಲಾಗಿದೆ. ಲೆಕ್ಕಪತ್ರಗಳನ್ನು ದಿನಾಂಕ 01-04-2007 ರಿಂದ ಅನ್ವಯವಾಗುವಂತೆ ಬರೆಯಲಾಗಿರುತ್ತದೆ.

ಆ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಇ) ಚಾಟರ್ಡ್ ಅಕೌಂಟೆಂಟ್ ಫರ್ಮಗಳಿಗೆ ಶುಲ್ಕವನ್ನು ಮೊದಲು ಜಿಲ್ಲಾ ಮಟ್ಟದಲ್ಲಿ ತದನಂತರ ತಾಲ್ಲೂಕು ಮಟ್ಟದಲ್ಲಿ ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಪಾವತಿಸಲು ಕ್ರಮವಹಿಸಲಾಗಿದೆ. ಪ್ರತಿ ಗ್ರಾಮ ಪಂಚಾಯತಿಯಿಂದ ಪ್ರತಿ ಮಾಹೆಗೆ ರೂ. 2000/-ಗಳವರೆಗೆ ಶುಲ್ಕವನ್ನು ಮೀರದಂತೆ ನಿಗದಿಪಡಿಸಲು ದಿನಾಂಕ 12-10-2007ರಂದು ಎಲ್ಲಾ ಜಿ.ಪಂ.ಗಳಿಗೆ ಪತ್ರ ಮುಖೇನ ತಿಳಿಸಲಾಗಿದೆ.

ಈ) ಜೋಡಿ ಲೆಕ್ಕ ಪದ್ಧತಿಯ ಜಿ.ಪಂ. ಅಥವಾ ತಾ.ಪಂ. ಮಟ್ಟದಲ್ಲಿಯಾಗಲಿ ಇಲ್ಲದಿರುವುದರಿಂದ ಗ್ರಾಮ ಪಂಚಾಯತಿಯ ಲೆಕ್ಕ ಪತ್ರ ಮತ್ತು ಆಯವ್ಯಯ ನಿಯಮಗಳು 2006ರ ಪ್ರಕಾರ ಮೊಟ್ಟ ಮೊದಲ ಬಾರಿಗೆ ಗ್ರಾಮ ಪಂಚಾಯಿತಿಗಳಲ್ಲಿ ಅಳವಡಿಸುವುದು ಸುಗಮವಾಗಿರಲಿಲ್ಲ. 2006-07 ರಲ್ಲಿ ಅಭಿವೃದ್ಧಿ ಅಧಿಕಾರಿಗಳು ಸಹ ನೇಮಕವಾಗಿರಲಿಲ್ಲ. ಆದ್ದರಿಂದ ಚಾರ್ಟರ್ಡ್ ಅಕೌಂಟೆಂಟ್ ಫರ್ಮಗಳಿಗೆ ಸೇವೆಯನ್ನು ಜೋಡಿ ಲೆಕ್ಕ ಪದ್ಧತಿಯಲ್ಲಿ ಲೆಕ್ಕಪತ್ರಗಳನ್ನು ನಿರ್ವಹಿಸುವುದಲ್ಲದೆ ಅಭಿವೃದ್ಧಿ ಅಧಿಕಾರಿ, ಕಾರ್ಯದರ್ಶಿ, ಬಿಲ್ ಕಲೆಕ್ಟರ್ ಇವರಿಗೆ ತರಬೇತಿಯನ್ನು ಸಹ ನೀಡಲು ಅನುಕೂಲವಾಗಲೆಂದು ಮತ್ತು ಪಂಚತಂತ್ರಾಂಶದಲ್ಲಿ ಗಣಕೀಕರಣಗೊಳಿಸಲು ಸಹಾಯಕವಾಗಲೂ ಸಹ ಅವರ ಸೇವಾ ಗುತ್ತಿಗೆ ಕರಾರಿನಲ್ಲಿ ಸೇರಿಸಲಾಗಿದೆ. ಯಾವ ಗ್ರಾಮ ಪಂಚಾಯಿತಿಗಳು ತಾವೆ ನಿರ್ವಹಿಸುವ ಸಾಮರ್ಥ್ಯ

ಹೊಂದಿರುತ್ತವೆಯೋ ಅಂತಹ ಗ್ರಾಮ ಪಂಚಾಯಿತಿಗಳು ಸದರಿಯವರ ಸೇವೆಯನ್ನು ಪಡೆಯದೆ ತಾವೆ ನಿರ್ವಹಿಸಲು ಸಹ ತಿಳಿಸಲಾಗಿದೆ.

ಊ) ಗ್ರಾಮ ಪಂಚಾಯಿತಿಗಳಲ್ಲಿ ಜೋಡಿ ನಮೂದು ಲೆಕ್ಕ ಪದ್ಧತಿಯಲ್ಲಿ ಲೆಕ್ಕಪತ್ರಗಳ ನಿರ್ವಹಣೆಗೆ ಸಂಬಂಧಿಸಿದಂತೆ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ ತರಬೇತಿ ಸಂಸ್ಥೆ, ಮೈಸೂರು ಇವರಿಂದ ತರಬೇತಿ ನೀಡಲಾಗಿದೆ. ಗ್ರಾಮ ಪಂಚಾಯಿತಿಗಳಲ್ಲಿ ಹೊಸದಾಗಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ನೇಮಕಗೊಂಡಿರುವುದರಿಂದ ಅವರ ಸಾಮರ್ಥ್ಯ ಹೆಚ್ಚಿಸಲು ಹಾಗೂ ಹೊಸದಾಗಿ ಅಳವಡಿಸಿಕೊಂಡಿರುವ 'ಪಂಚತಂತ್ರ' ತಂತ್ರಾಂಶದಲ್ಲಿ ಲೆಕ್ಕ ಪತ್ರ ಅಳವಡಿಸಬೇಕಾಗಿರುವುದರಿಂದ ದಿನಾಂಕ 30-09-2012ರವರೆಗೆ ಚಾರ್ಟರ್ಡ್ ಅಕೌಂಟೆಂಟ್ ಫರ್ಮಗಳಿಗೆ ಸೇವೆಯನ್ನು ಅಗತ್ಯವಿದ್ದಲ್ಲಿ ಪಡೆಯುವಂತೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರಿಗೆ ತಿಳಿಸಲಾಗಿದೆ.

ಗ್ರಾಮ ಪಂಚಾಯಿತಿಯ ತಲಾನುದಾನದ ಉಪಯೋಗದ ವಿವರ

147 (10) ಶ್ರೀ ವಸಂತಬಂಗೇರ ಕೆ. (ಬೆಳ್ತಿಂಗಡಿ):- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) 2009-10 ಮತ್ತು 2010-11 ನೇ ಸಾಲಿನಲ್ಲಿ ಗ್ರಾಮ ಪಂಚಾಯಿತಿಗಳಿಗೆ ಸರ್ಕಾರದಿಂದ ಬಿಡುಗಡೆ ಮಾಡಲಾದ ತಲಾನುದಾನದ ಮೊತ್ತ ಎಷ್ಟು ;

ಆ) ಸದರಿ ಮೊತ್ತದಲ್ಲಿ ವಿದ್ಯುತ್ ಶುಲ್ಕವಾಗಿ ಪಾವತಿಸಿದ ಮೊತ್ತ ಎಷ್ಟು ;

ಇ) ಸಿಬ್ಬಂದಿ ವೇತನಕ್ಕಾಗಿ ಪಾವತಿಸಿದ ಮೊತ್ತ ಎಷ್ಟು ;

ಈ) ಅಭಿವೃದ್ಧಿ ಕಾಮಗಾರಿಗಳನ್ನು ಹೊರತುಪಡಿಸಿ ಕಛೇರಿ ಮತ್ತು ಇತರೆ ಬಾಬ್ತುಗಳಿಗಾಗಿ ಪಾವತಿಸಿದ ಮೊತ್ತ ಎಷ್ಟು ; (ಮೇಲಿನ ವಿವರಗಳನ್ನು ತಾಲ್ಲೂಕುವಾರು ನೀಡುವುದು)